ಶ್ರೀ ಬಿ.ಮುನಿಯಪ್ಪಮುದ್ದಪ್ಪ (ಮುಜರಾಯಿ ಸಚಿವರು):-

ಅ) 1995-96ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ರೂ.5.00 ಕೋಟಿ ಆಯವ್ಯಯದಲ್ಲಿ ನೀಡಿದ್ದು, ರೂ.4.50 ಕೋಟಿ ಬಿಡುಗಡೆಯಾಗಿದೆ. ಈ ಹಣವನ್ನು ಇನ್ನು ಉಪಯೋಗವಾಗಿರುವುದಿಲ್ಲ.

ಆ) ಸದರಿ ವಿಧಾನಸಭಾ ಕ್ಷೇತ್ರದಲ್ಲಿ ರೂ.4.20 ಲಕ್ಷಗಳನ್ನು 22 ಸಂಸ್ಥೆಗಳಿಗೆ ಸಮಿತಿಯು ಮಂಜೂರಾತಿ ನೀಡಿದ್ದು ಅದರಲ್ಲಿ 7 ಸಂಸ್ಥೆಗಳ ಅಂದಾಜುಪಟ್ಟಿ ಮತ್ತು ನಕ್ಷೆಗೆ ಆಡಳಿತ ಮಂಜೂರಾತಿ ನೀಡಿ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ 15 ಸಂಸ್ಥೆಗಳ ನಕ್ಷೆ ಮತ್ತು ಅಂದಾಜುಪಟ್ಟಿಯನ್ನು ಪಂಚಾಯತ್ ಅಭಿಯಂತರರಿಂದ ಪಡೆದು ಆಡಳಿತ ಮಂಜೂರಾತಿ ನೀಡಿ ಈ ಕಾರ್ಯಗಳನ್ನು ತುರ್ತಾಗಿ ಪ್ರಾರಂಭಿಸಲಾಗುವುದು. ಈ ಕಾಮಗಾರಿಗಳಿಗೆ 93-94 ಮತ್ತು 94-95 ಸಾಲಿನಲ್ಲಿ ಬಿಡುಗಡೆಯಾದ ಹಣವನ್ನು ಉಪಯೋಗಿಸಲಾಗುತ್ತಿದೆ.

ವಿಷಯ:- ಗ್ರಾಮ ಸಹಾಯಕರಿಗೆ ಗೌರವ ಸಂಭಾವನೆಯಲ್ಲಿ ಹೆಚ್ಚಳ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 226 (373)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ನೇಮಕಗೊಂಡಿರುವ ಗ್ರಾಮ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು).

ಆ) ಗ್ರಾಮ ಸಹಾಯಕರ ಹುದ್ದೆಯನ್ನು ರೋಸ್ಟರ್ ಪದ್ಧತಿಯ ಮೂಲಕ ನೇಮಕ ಮಾಡಿಕೊಳ್ಳಲಾಗಿದೆಯೇ, ಹಾಗಿದ್ದಲ್ಲಿ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು?

ಇ) ಇವರಿಗೆ ನೀಡುತ್ತಿರುವ ಗೌರವ ಸಂಭಾವನೆಯನ್ನು ಹೆಚ್ಚಿಸಲು ಸಾಧ್ಯವೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) 10450 (ಜಿಲ್ಲಾವಾರು ವಿವರ ಲಗತ್ತಿಸಿದೆ.)

ಆ) ಸದರಿ ಹುದ್ದೆಗಳು ಮಿತ ವೇತನ ಹುದ್ದೆಗಳಾಗಿದ್ದು, ವೃಂದ ಮತ್ತು ನೇಮಕಾತಿ ನಿಯಮದಡಿಯಲ್ಲಿ ಬಾರದೇ ಇರುವುದರಿಂದ, ರೋಸ್ಟರ್ ಪದ್ಧತಿ ಅನ್ವಯಿಸುವುದಿಲ್ಲ.

ಇ) ನಿಗಧಿತ ಸಂಭಾವನೆ ಮಾಸಿಕ ರೂ.600.00ರಿಂದ ರೂ.800.00ಕ್ಕೆ ದಿನಾಂಕ 1.1.94ರಿಂದ ಹೆಚ್ಚಿಸಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಪುನಃ ಹೆಚ್ಚಿಸಲು ಸಾಧ್ಯವಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 373ಕ್ಕೆ ಅನುಬಂಧ

1.	ಬೆಂಗಳೂರು (ನಗರ) ಜಿಲ್ಲೆ	:	192
2.	ಬೆಂಗಳೂರು (ಗ್ರಾಮಾಂತರ ಜಿಲ್ಲೆ)	:	518
3.	ಕೋಲಾರ ಜಿಲ್ಲೆ	:	610
4.	ಶಿವಮೊಗ್ಗ ಜಿಲ್ಲೆ	:	550
5.	ಚಿತ್ರದುರ್ಗ ಜಿಲ್ಲೆ	:	520
6.	ತುಮಕೂರು ಜಿಲ್ಲೆ	:	660
7.	ಮೈಸೂರು ಜಿಲ್ಲೆ	:	750
8.	ಚಿಕ್ಕಮಗಳೂರು ಜಿಲ್ಲೆ	:	330
9.	ಹಾಸನ ಜಿಲ್ಲೆ	:	470
10.	ಮಂಗಳೂರು ಜಿಲ್ಲೆ	:	570
11.	ಮಂಡ್ಯ ಜಿಲ್ಲೆ	:	500
12.	ಕೊಡಗು ಜಿಲ್ಲೆ	:	140
13.	ಗುಲ್ಬರ್ಗಾ	:	650
14.	ಬೀದರ್ ಜಿಲ್ಲೆ	:	350
15.	ಬಳ್ಳಾರಿ ಜಿಲ್ಲೆ	:	450
16.	ರಾಯಚೂರು ಜಿಲ್ಲೆ	:	550
17.	ಬೆಳಗಾವಿ ಜಿಲ್ಲೆ	:	740
18.	ಧಾರವಾಡ ಜಿಲ್ಲೆ	:	800
19.	ಉತ್ತರ ಕನ್ನಡ ಜಿಲ್ಲೆ	:	400
20.	ಬಿಜಾಪುರ ಜಿಲ್ಲೆ	:	70
		ಒಟ್ಟು	: 10450